# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 968 / 2021

**ಚಾಸಾ :- 14 / ಪ್ರಾಸಾ :- 6**

| | |
|---|---|
| ಹೆಸರು | **ಶ್ರೀಕಾಂತ್ ಎಸ್** |
| ಗಂಡನ ಹೆಸರು | **ಲೇಟ್ ಶಿವರಾಮು** |
| ವಯಸ್ಸು | **40** |
| ಉದ್ಯೋಗ | **ಪೋಲಿಸ್ ಇನ್ಸ್ ಪೆಕ್ಟರ್** |
| ವಿಳಾಸ | **ಬೆಂಗಳೂರು** |

ದಿನಾಂಕ: **21.05.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ನವೆಂಬರ್ 2020 ರಿಂದ ಏಪ್ರಿಲ್ ?2022 ರವರೆಗೆ ಪಿ ಎಸ್ ಐ ಎಂದು ಮಾಗಡಿ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. .

ದಿನಾಂಕ 28.11.2020 ರಂದು ಪ್ರಕರಣದ ಮುಂದಿನ ತನಿಖೆಕಾಗಿ ಕಡತವನ್ನು ಚಾಸಾ-13 ರವರಿಂದ ಸ್ವೀಕರಿಸಿರುತ್ತೇನೆ. ದಿನಾಂಕ 20.01.2021 ರಂದು ಚಾ-1 ರವರ ಕರ್ತವ್ಯ ಧೃಡೀಕರಣ ಪತ್ರಕ್ಕಾಗಿ ತಾಲ್ಲೂಕು ಪಂಚಾಯ್ತಿಯ ಕಾರ್ಯನಿರ್ವಹಣ ಅಧಿಕಾರಿ,ಮಾಗಡಿ ರವರಿಗೆ ಮನವಿ ಪತ್ರವನ್ನು ನೀಡಿರುತ್ತೇನೆ. ದಿನಾಂಕ 22.02.2021 ರಂದು ಮಾನ್ಯ ಕಾರ್ಯನಿರ್ವಹಕ ಅಧಿಕಾರಿ ತಾಲ್ಲೂಕು ಪಂಚಾಯ್ತಿಯವರು ದಿನಾಂಕ 04.05.2020 ರಂದು ಚಾಸಾ-1 ರವರು ಕರ್ತವ್ಯಕ್ಕೆ ಹಾಜರು ಇದ್ದರು ಎಂದು ಧೃಡೀಕರಣ ಪತ್ರವನ್ನು ನೀಡಿದ್ದು ಅದನ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈಗ ಸಾಕ್ಷಿಗೆ ಸದರಿ ಧೃಡೀಕರಣ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಧೃಡೀಕರಣ ಪತ್ರವನ್ನು ನಿಪಿ-4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಆರೋಪಿಗಳ ವಿರುದ್ದ ಸಾಕ್ಷ್ಯಧಾರಗಳು ತನಿಖೆಯಲ್ಲಿ ಕಂಡುಬಂದ ಕಾರಣ ಆರೋಪಿಗಳ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರಧಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲು ಃ- ಆರೋಪಿ ಪರ ಶ್ರೀ ಆರ್ ಎಸ್ ವಕೀಲರಿಂದಃ**

? ಚಾಸಾ-1 ರವರು ದೂರನ್ನು ನೀಡಿದ ಸಂದರ್ಭದಲ್ಲಿ ಮಾಗಡಿ ಕ್ಷೇತ್ರದ ಶಾಶಕರಾಗಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಿನಾಂಕ 04.05.2020 ರಂದು ಪ್ರಧಾನಮಂತ್ರಿ ಗಾಮ್ ಸಡಕ್ ಯೋಜನೆ ಅಡಿಯಲ್ಲಿ ಹಾರೋಹಳ್ಳಿ ಗ್ರಾಮದಿಂದ ಬಸವನಪಾಳ್ಯ ಗ್ರಾಮದ ಮುಖಾಂತರ ಶ್ರೀಪತಿಹಳ್ಳಿಕಲ್ಯಾ ಗ್ರಾಮದವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜಾ ಕಾರ್ಯಕ್ರಮ ಇತ್ತು ಎಂಬುದರ ಸಂಬಂಧ ದಾಖಲೆಯನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿಯು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 04.05.2020 ರಂದು ಸರ್ಕಾರಿ ಅಧಿಕಾರಿಗಳು ಎಷ್ಟು ಜನ ಇದ್ದರು ಎಂದು ಪರಿಶೀಲಿಸಿ ಆ ಬಗ್ಗೆ ದಾಖಲೆ ಪಡೆದಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಬಸವನಪಾಳ್ಯ ಗ್ರಾಮದವರನ್ನು ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಮಾಡಿರುವುದಿಲ್ಲವೆಂದು ನುಡಿಯುತ್ತಾರೆ. ನಿಪಿ-4 ರ ದಾಖಲೆಯು ರಾಜಕೀಯ ಉದ್ದೇಶದಿಂದ ದುರುಪಯೋಗ ಪಡಿಸಿಕೊಂಡು ದಾಖಲೆ ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಆ ಸಂಧರ್ಭದಲ್ಲಿ ಶಾಶಕರ ಒತ್ತಡಕ್ಕೆ ಮಣಿದು ಆರೋಪಿಗಳ ವಿರುದ್ದ ಒಂದು ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ, ಆರೋಪಿಗಳ ವಿರುದ್ದ ಯಾವುದೇ ಸಾಕ್ಷ್ಯಾಧಾರಗಳು ಇರದೇ ಇದ್ದರೂ ಸುಳ್ಳು ಅಂತಿಮ ವರಧಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**